ನಿರ್ಮಾತೃಗಳ ಅಂಬೋಣ. ಮುಂದಿನ ದಿನಗಳಲ್ಲಿ ಬಾಹ್ಯಾಕಾಶದಲ್ಲಿ ಹಾಗೂ ಚಂದ್ರನಲ್ಲಿ ಮನುಷ್ಯವಾಸಕ್ಕೆ ಯೋಗ್ಯವಾದ ಜಾಗಗಳನ್ನು ರೂಪಿಸುವ ಯೋಜನೆಯನ್ನೂ ಆಸ್ಗರ್ಡಿಯಾ ಹೊಂದಿದೆ.

ಇಂಥದ್ದೊಂದು ರಾಷ್ಟ್ರ ಅಸ್ತಿತ್ವಕ್ಕೆ ಬಂದಿರುವುದು ನಿನ್ನೆ ಮೊನ್ನೆಯಲ್ಲ, ಎರಡು ವರ್ಷಗಳ ಹಿಂದೆಯೇ ರೂಪುತಳೆದ ಯೋಜನೆ ಇದು. ಈಗಾಗಲೇ 234 ರಾಷ್ಟ್ರಗಳಿಂದ ಸುಮಾರು 18 ಸಾವಿರ ಜನರು ಅದರ ಪೌರತ್ವ ಪಡೆದುಕೊಂಡಿದ್ದಾರೆ. ಆಸ್ಗರ್ಡಿಯಾ ಕುರಿತು ಆಸಕ್ತಿ ಇರುವ ಇನ್ನೂ ಹಲವರು ಅದರ ವೆಬ್‌ಸೈಟ್‌ನಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಆದರೆ ಇವರು ಪ್ರಾಥಮಿಕ ಮಾಹಿತಿ ಮಾತ್ರ ನೀಡಿರುವುದರಿಂದ ಹಿಂಬಾಲಕರು ಎಂದಷ್ಟೇ ಪರಿಗಣಿಸಲಾಗುತ್ತದೆ. ಇದುವರೆಗೆ 10 ಲಕ್ಷಕ್ಕೂ ಹೆಚ್ಚು ಜನರು ಈ ಬಾಹ್ಯಾಕಾಶ ರಾಷ್ಟ್ರದ ಹಿಂಬಾಲಕರಾಗಿದ್ದಾರೆ.




## ಆರ್ಥಿಕ ಅಭಿವೃದ್ಧಿಗೊಂದು ಕಾರ್ಯಾಗಾರ

ಆಸ್ಗರ್ಡಿಯಾದ ಅಭಿವೃದ್ಧಿಗೆ ಆರ್ಥಿಕ ಯೋಜನೆಗಳನ್ನು ರೂಪಿಸುವ ಸಲುವಾಗಿ 2018ರ ಮಾರ್ಚ್‌ನಲ್ಲಿ ಸ್ಪರ್ಧೆ ಏರ್ಪಡಿಸಲಾಗಿತ್ತು. 60ಕ್ಕೂ ಹೆಚ್ಚು ಯೋಜನೆಗಳು ಸ್ಪರ್ಧೆಯಲ್ಲಿದ್ದವು. ಈ ವೇಳೆ ಸಾಕಷ್ಟು ಆಸಕ್ತಿದಾಯಕ ಹೊಳಹುಗಳನ್ನು ಹಂಚಿಕೊಳ್ಳಲಾಗಿತ್ತು. ಇದರಿಂದ ಉತ್ತೇಜಿತರಾದ ಆಶರ್ ಬೆಯ್ಲಿ ಅವರು ಬಾಹ್ಯಾಕಾಶ ರಾಷ್ಟ್ರದ ಆರ್ಥಿಕ ವ್ಯವಸ್ಥೆ ಅಭಿವೃದ್ಧಿಗಾಗಿ ಈಚೆಗೆ (ಅಕ್ಟೋಬರ್ 25ರಿಂದ 29ರವರೆಗೆ) ಲಂಡನ್‌ನ 'ನ್ಯಾಷನಲ್ ಇನ್ ಸ್ಟಿಟ್ಯೂಟ್ ಫಾರ್ ಹೆಲ್ತ್ ಆ್ಯಂಡ್ ಕೇರ್ ಎಕ್ಸಲೆನ್ಸ್'ನಲ್ಲಿ ವಿಶೇಷ ಕಾರ್ಯಾಗಾರವೊಂದನ್ನು ನಡೆಸಿದರು.

### 12ನೇ ಸ್ಥಾನದಲ್ಲಿ ಭಾರತ

ಭಾರತದಲ್ಲಿ 402 ಜನರು ಈ ಬಾಹ್ಯಾಕಾಶ ರಾಷ್ಟ್ರದ ಪ್ರಜೆಗಳಾಗಿದ್ದು, ಈ ಪಟ್ಟಿಯಲ್ಲಿ ಟಾಪ್ 12ನೇ ಸ್ಥಾನದಲ್ಲಿದೆ. 3644 ಆಸ್ಗರ್ಡಿಯಾ ಪ್ರಜೆಗಳನ್ನು ಹೊಂದಿರುವ ಅಮೆರಿಕ ಟಾಪ್ 1 ಹಾಗೂ 2150 ಪ್ರಜೆಗಳನ್ನು ಹೊಂದಿರುವ ಟರ್ಕಿ 2ನೇ ಸ್ಥಾನದಲ್ಲಿದೆ. ಚೀನಾ 805 ಹಾಗೂ ಭಾರತದ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ 61, ನೇಪಾಳ 6 ಆಸ್ಗರ್ಡಿಯಾ ಪ್ರಜೆಗಳನ್ನು ಹೊಂದಿದೆ.

### ರೂಪುಗೊಂಡಿದ್ದು ಹೇಗೆ?

2016ರ ಅಕ್ಟೋಬರ್ 12ರಂದು ಡಾ. ಇಗೊರ್ ಆಶರ್ ಬೆಯ್ಲಿ ಹಾಗೂ ಅವರ ಕೆಲವು ಮಿತ್ರರು ಸೇರಿ 'ಆಸ್ಗರ್ಡಿಯಾ' ನಿರ್ಮಾಣ ಕಾರ್ಯ ಆರಂಭಿಸಿದರು. ಬಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿಸಿದವರೇ ಈ ಯೋಜನೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ ಎನ್ನುವುದು ಗಮನಾರ್ಹ ಸಂಗತಿ.

ನವದೆಹಲಿಯಲ್ಲಿರುವ 'ಡುವಾಅಸೋಸಿಯೇಟ್ಸ್' ಪಾಲುದಾರರಾಗಿರುವ ಭಾರತದ ರಂಜನಾ ಕೌಲ್ ಸಹ ಈ ಯೋಜನೆಯಲ್ಲಿ ಭಾಗಿಯಾಗಿದ್ದಾರೆ. ಈ ಸಂಸ್ಥೆ ಪ್ಯಾರಿಸ್‌ನಲ್ಲಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ಕಾನೂನು ಸಂಸ್ಥೆಯ ಅಂಗ. ಇವರು ಭಾರತದ ನ್ಯೂ ಸ್ಪೇಸ್ ಸ್ಟಾರ್ಟ್‌ಅಪ್‌ಗಳಿಗೆ ಸಲಹೆಗಾರರಾಗಿಯೂ ಕಾರ್ಯನಿರ್ವಹಿಸುತ್ತಾರೆ.

ಈ ರಾಷ್ಟ್ರ ನಿರ್ಮಾಣದಲ್ಲಿ ತತ್ವಶಾಸ್ತ್ರ, ಕಾನೂನು, ವೈಜ್ಞಾನಿಕ/ತಂತ್ರಜ್ಞಾನ ಆಯಾಮಗಳು ಅಡಕವಾಗಿವೆ.

ನಾರ್ಸ್ ಪುರಾಣದ ಪ್ರಕಾರ 'ಆಸ್ಗರ್ಡ್' ಎಂದರೆ ಅದು ಆಕಾಶದಲ್ಲಿದ್ದ ದೇವತೆಗಳ ರಾಷ್ಟ್ರವಂತೆ. ಇದರಿಂದಾಗಿ ಈ ನೂತನ ಬಾಹ್ಯಾಕಾಶ ರಾಷ್ಟ್ರಕ್ಕೆ ಈ ಹೆಸರಿಡಲಾಗಿದೆ ಎನ್ನುವುದು ಅಶುರ್ಬೆಯ್ಲಿ ಅವರ ವಿವರಣೆ.

ಇದೊಂದು ಸಂಪೂರ್ಣ ಸ್ವತಂತ್ರ ರಾಷ್ಟ್ರ. ಭವಿಷ್ಯದಲ್ಲಿ ಇದು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಲಿದೆ ಎನ್ನುವ ಭರವಸೆ ಸಂಸ್ಥಾಪಕರದ್ದು. ಸ್ವತಂತ್ರ ರಾಷ್ಟ್ರ ಮಾನ್ಯತೆಗೆ ಬೇಕಾದ ಸರ್ಕಾರ, ರಾಯಭಾರ ಕಚೇರಿಗಳು, ಧ್ವಜ, ರಾಷ್ಟ್ರಗೀತೆ, ಲಾಂಛನ ಈ ಎಲ್ಲವೂ ಇವೆ.

### ಜ್ಞಾನಪ್ರಸರಣದ ಉದ್ದೇಶ

ಬಾಹ್ಯಾಕಾಶದಲ್ಲಿ ಶಾಂತಿ ಕಾಪಾಡುವುದು, ಬಾಹ್ಯಾಕಾಶದಿಂದ ಎದುರಾಗುವ ಅಪಾಯಗಳಿಂದ ಭೂಮಿಯನ್ನು ರಕ್ಷಿಸುವುದು ಹಾಗೂ ಸೌಕರ್ಯಗಳನ್ನು ಒದಗಿಸುವುದು ಈ ಆಯಾಮದ ಉದ್ದೇಶ. ಮುಕ್ತ ಹಾಗೂ ಉಚಿತವಾದ ವೈಜ್ಞಾನಿಕ ಆಧರಿತ ಜ್ಞಾನ ಪ್ರಸರಣೆ ಮಾಡುವುದು ಸಹ ಮುಖ್ಯ ಗುರಿ. ಇದರಿಂದಾಗಿ ಪ್ರಸ್ತುತ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಪಾರಮ್ಯ ಹೊಂದಿಲ್ಲದ ರಾಷ್ಟ್ರಗಳಿಗೆ ಸಹಾಯವಾಗಲಿದೆ.

### ಬಾಹ್ಯಾಕಾಶ ಕಾನೂನಿನ ಕನಸು

ಬಾಹ್ಯಾಕಾಶ ಕಾನೂನಿಗೆ ಸಂಬಂಧಪಟ್ಟ ಸಾಕಷ್ಟು ಸಮಸ್ಯೆಗಳು ಪರಿಹಾರ ಕಾಣದೆ ಹಾಗೆಯೇ ಉಳಿದಿವೆ. ಆಧುನಿಕ ಅಂತರರಾಷ್ಟ್ರೀಯ ಕಾನೂನಿನ ಸಂಕೀರ್ಣ ಸ್ವರೂಪದಿಂದಾಗಿ ಮುಂದೆಯೂ ಪರಿಹಾರವಾಗದೆ ಇರಬಹುದು. ಭೌಗೋಳಿಕ/ರಾಜಕೀಯ ವ್ಯಾಜ್ಯಗಳು ಎಲ್ಲದರ ಮೇಲೂ ಸಾಕಷ್ಟು ಪ್ರಭಾವ ಬೀರುತ್ತವೆ. ಹಾಗಾಗಿ ಬಾಹ್ಯಾಕಾಶದಲ್ಲಿ ಹೊಸ ಕಾನೂನುಗಳನ್ನು ರೂಪಿಸುವ ಸಂದರ್ಭ ಸೃಷ್ಟಿಯಾಗಿದೆ.

ನೂತನ ಬಾಹ್ಯಾಕಾಶ ಕಾನೂನು ವಿಶ್ವದ ಪ್ರತಿ ವ್ಯಕ್ತಿಯ ಹಿತಾಸಕ್ತಿಗಳನ್ನು ರಕ್ಷಿಸುವಂತೆ ಇರಬೇಕು ಎನ್ನುವುದು 'ಆಸ್ಗರ್ಡಿಯಾ'ದ ಧ್ಯೇಯ.

'ಭೂಮಿ ಮೇಲಿನ ರಾಷ್ಟ್ರಗಳ ನಡುವಿನ ಸಂಬಂಧಗಳ ಕುರಿತು ಮಧ್ಯಪ್ರವೇಶಿಸುವುದಿಲ್ಲ, ಹಾಗೆಯೇ ಬಾಹ್ಯಾಕಾಶ ರಾಷ್ಟ್ರದ ಚಟುವಟಿಕೆಗಳಲ್ಲಿ ಭೂಮಿಯೂ ಮಧ್ಯಪ್ರವೇಶಿಸಬಾರದು' ಎನ್ನುವುದು ಇಲ್ಲಿನ ಮೂಲ ಕಾನೂನು ತತ್ವ. ಭೂಮಿಯ ಸಮೀಪ ಹಾಗೂ ಬಾಹ್ಯಾಕಾಶದಲ್ಲಿ ಅನ್ವೇಷಣೆ ನಡೆಸಲು ನೂತನ ಕಾನೂನುಬದ್ಧ ವೇದಿಕೆ ಸೃಷ್ಟಿಸುವುದು ಸಹ ಇದರಲ್ಲಿ ಸೇರಿದೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ಕಾನೂನು ಹಾಗೂ ಭೌಗೋಳಿಕ ರಾಜಕೀಯದ ಬದಲಿಗೆ 'ಜಾಗತಿಕ ಬಾಹ್ಯಾಕಾಶ ಕಾನೂನು' (universal space law) ಹಾಗೂ 'ಖಗೋಳ ರಾಜಕೀಯ'ವನ್ನು (astropolitics) ಅನುಷ್ಠಾನಕ್ಕೆ ತರಬೇಕು ಎನ್ನುವುದು ಈ ಬಾಹ್ಯಾಕಾಶ ರಾಷ್ಟ್ರದ ನಿಲುವು.

### ಪೌರತ್ವ ಹೇಗೆ?

18 ವರ್ಷ ತುಂಬಿರುವವರು ಈ ರಾಷ್ಟ್ರದ ಪೌರರಾಗಬಹುದು. ಇದಕ್ಕಾಗಿ ಪೌರತ್ವ ಶುಲ್ಕ ವಾರ್ಷಿಕ 100 ಡಾಲರ್ (₹7,925 ಸದ್ಯದ ವಿನಿಮಯ ದರದ ಅನುಸಾರ) ಪಾವತಿಸಬೇಕು. ಪ್ರತಿ ವರ್ಷ ಪೌರತ್ವ ನವೀಕರಣಗೊಳಿಸಬೇಕಾಗುತ್ತದೆ. ಆಸ್ಗರ್ಡಿಯಾ ಅಧಿಕೃತ ಜಾಲತಾಣದಲ್ಲಿ ನೋಂದಾಯಿಸಿಕೊಂಡು, ಪ್ರೊಫೈಲ್ ಮಾಹಿತಿ ಭರ್ತಿ ಮಾಡಿ, ಅಲ್ಲಿನ ಸಂವಿಧಾನವನ್ನು ಒಪ್ಪಿಕೊಂಡ ಬಳಿಕ ಬಾಹ್ಯಾಕಾಶ ರಾಷ್ಟ್ರದ ನಿವಾಸಿಗಳು ಎಂದು ಪರಿಗಣಿಸಲಾಗುತ್ತದೆ. 'ಆಸ್ಗರ್ಡಿಯಾ' ವೆಬ್‌ಸೈಟ್ ಕೊಂಡಿ: https://asgardia.space/en/




ಇಗೊರ್ ಆಶರ್ ಬೆಯ್ಲಿ